


**ISSN Print:** 2394-7500
**ISSN Online:** 2394-5869
**Impact Factor:** 5.2
IJAR 2018; 4(4): 177-179
www.allresearchjournal.com
Received: 25-02-2018
Accepted: 26-03-2018

**ರಾಜಕುಮಾರ ಎಸ್ ಮಾಳಗೆ**
ಸಂಶೋಧನ ವಿದ್ಯಾರ್ಥಿ ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

**Correspondence**
**ರಾಜಕುಮಾರ ಎಸ್ ಮಾಳಗೆ**
ಸಂಶೋಧನ ವಿದ್ಯಾರ್ಥಿ ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

# ಭಾರತೀಯ ಬುಡಕಟ್ಟು ಮಹಿಳೆಯರ ಸಮಾಜಿಕ ಆರ್ಥಿಕ ಸ್ಥಾನಮಾನ

**ರಾಜಕುಮಾರ ಎಸ್ ಮಾಳಗೆ**

ಭಾರತ ದೇಶವು ಗ್ರಾಮೀಣ ಪ್ರದೇಶಗಳಿಂದ ಕೂಡಿದ ದೊಡ್ಡ ರಾಷ್ಟ್ರವಾಗಿದೆ. ಇಂತಹ ರಾಷ್ಟ್ರದಲ್ಲಿ ಹಲವಾರು ಮತ, ಧರ್ಮ, ಜಾತಿ, ಪಂಥಗಳು ಇರುವುದು ಕಂಡುಬರುತ್ತದೆ. ಇಷ್ಟೊಂದು ವೈವಿಧ್ಯತೆಯಿರುವ ದೇಶದಲ್ಲಿ ಜನಸಮುದಾಯಗಳು ಬದುಕುವ ಶೈಲಿ, ನೆಲೆಯು ಕೂಡ ವಿಭಿನ್ನವಾಗಿದೆ. ಕೇಲವೊಂದು ಸಮುದಾಯಗಳು ಕನಿಷ್ಟ ಮಟ್ಟದ ಬದುಕನ್ನು ಸವೆಸುತ್ತಿರುವುದು ಕಾಣಬಹುದಾಗಿದೆ. ಭಾರತ ದೇಶ ಸ್ವಾತಂತ್ರ್ಯಗೊಂಡ ನಂತರ ಸಂವಿಧಾನದಲ್ಲಿ ಹಿಂದೂಳಿದ ವರ್ಗದ ಸಮುದಾಯಗಳಿಗೆ ಸಂವಿಧಾನಾತ್ಮಕ ಹಕ್ಕು, ಸೌಲಭ್ಯಗಳನ್ನು ಕಲ್ಪಿಸಿದೆ. ಅದು ಭಾರತ ಸಂವಿಧಾನದ 342ನೇ ವಿಧಿ ಅನ್ವಯವಾಗಿ ಈ ಸಮುದಾಯಗಳ ಸಾಮಾಜಿಕ ಸ್ಥಿತಿ–ಗತಿ ಹಾಗೂ ಸವಲತ್ತುಗಳನ್ನು ಆಧರಿಸಿ ನೀಡಲಾಗಿದೆ. ಅಂತಹ ಜನ ಸಮುದಾಯದಲ್ಲಿ ಬುಡಕಟ್ಟು ಜನಾಂಗ ಅಥವಾ ಬುಡಕಟ್ಟು ಸಮುದಾಯವು ಕೂಡ ಒಂದಾಗಿದೆ. ಇದನ್ನು ಸಂವಿಧಾನಾತ್ಮಕವಾಗಿ (ಸೆಡ್ಯೂಲ್ ಟ್ರೈಬ್) ಪರಿಶಿಷ್ಟ ಪಂಗಡದವರು ಎಂದು ಪರಿಗಣಿಸಲಾಗಿದೆ. ಇವರನ್ನು ಮೂಲದಲ್ಲಿ ಆದಿವಾಸಿಗಳೆಂದು ಉಲ್ಲೇಖಿಸಿರುವುದು ಇತಿಹಾಸದಿಂದ ತಿಳಿದುಬರುತ್ತದೆ. ಇವರು ಯಾವಾಗಲೂ ಸಾಮಾಜಿಕವಾಗಿ ಮತ್ತು ಭೌಗೋಳಿಕವಾಗಿ ಪ್ರತ್ಯೇಕಗೊಂಡು ತಮ್ಮದೆಯಾದ ಸಾಂಸ್ಕೃತಿಕ ಗುಣಲಕ್ಷಣಗಳೊಂದಿಗೆ ವಿವಿಧ ಜನಾಂಗದವರು ವಿವಿಧ ಭಾಷೆಗಳನ್ನು ಮಾತನಾಡುತ್ತ ತಮ್ಮದೆಯಾದ ಪರಿಸರದಲ್ಲಿ ಹರಿದು ಹಂಚಿ ಹೋಗಿದ್ದರು. ಸ್ವಾತಂತ್ರ್ಯ ನಂತರ ದೇಶದಾದ್ಯಂತ ಇರುವ ಬುಡಕಟ್ಟು ಸಮುದಾಯಗಳನ್ನು ರಕ್ಷಿಸಲು, ಅವರ ಹಿತಾಸಕ್ತಿಗಳನ್ನು ಕಾಪಾಡಲು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಬುಡಕಟ್ಟು ಸಮುದಾಯದ ಜನರನ್ನು ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಪ್ರಗತಿಪರ ಚಿಂತನೆಯನ್ನು ಮಾಡಲಾಯ್ತು. ಅದೇ ರೀತಿಯಾಗಿ ಈ ಸಮುದಾದಲ್ಲಿನ ಮಹಿಳೆಯರ ಸ್ಥಿತಿ–ಗತಿ ಅವರ ಸಾಂಸ್ಕೃತಿಕ ಚಿಂತನೆ ಮುಂತಾದವುಗಳ ಬಗ್ಗೆ ವಿಚಾರಣೆಗೆ ತೊಡಗಿಸಲಾಯಿತ್ತು. ಈ ಕಾರಣದಿಂದಾಗಿಯೇ ಇವತ್ತು ಎಷ್ಟೋ ಬುಡಕಟ್ಟು ಸಮುದಾಯಗಳು ಇವೆ ಎಂಬುವುದೇ ಗಮನಕ್ಕೆ ಬರದ ರೀತಿಯಲ್ಲಿ ಬದುಕನ್ನು ಸಾಗಿಸುತ್ತಿದ್ದಾರೆ. ಇಂತಹ ಸಮುದಾಯಗಳನ್ನು ಪತ್ತೆ ಹಚ್ಚಿ ಅವರನ್ನು ಕಾಡಿನಿಂದ ನಾಡಿಗೆ, ಅನಾಗರೀಕತೆಯಿಂದ ನಾಗರೀಕತೆಯೆಡೆಗೆ, ತರುವಂತಹ ಪ್ರಯತ್ನದ ಜೊತೆಗೆ ಅವರ ಸಾಸ್ಕೃತಿಕ ವಿಚಾರಗಳು, ಅವರಲ್ಲಿರುವ ಕಲೆ ಮತ್ತು ಸಾಂಸ್ಕೃತಿಕ ಆಚರಣೆಗಳನ್ನು ಹೊರಜಗತ್ತಿಗೆ ತಿಳಿಸಬೇಕಾದ ಅಗತ್ಯತೆ ಎಂದೆಂದಿಗಿಂತಲೂ ಇಂದು ಅವಶ್ಯಕವಾಗಿದೆ.

ಬುಡಕಟ್ಟು ಸಮುದಾಯದ ಜನಾಂಗದವರ ಕುರಿತು ಇಲ್ಲಿಯವರೆಗೂ ಅನೇಕ ಸಂಶೋಧನೆಗಳು ನಡೆದಿವೆ ಹಾಗೂ ಇನ್ನೂ ನಡೆಯುತ್ತಲೂ ಇವೆ. ಈ ಎಲ್ಲಾ ಅಂಶಗಳಿಂದ ಗಮನಿಸಿದಾಗ ಸಾಮಾನ್ಯ ವರ್ಗದ ಜನರಿಗೂ ಬುಡಕಟ್ಟು ಸಮುದಾಯದ ಜನರಲ್ಲಿರುವ ಸ್ಥಾನ–ಮಾನ, ಕಲೆ, ಸಂಸ್ಕೃತಿ, ಆಚಾರ ವಿಚಾರ ಮತ್ತು ಮೂಲಭೂತ ಸೌಕರ್ಯಗಳ ಹೋಲಿಕೆ ಮಾಡಿದಾಗ ಅಜಗಜಾಂತರ ವ್ಯತ್ಯಾಸ ಕಂಡುಬರುತ್ತದೆ. ಅದರಲ್ಲೂ ಬುಡಕಟ್ಟು ಮಹಿಳೆಯರ ಸ್ಥಿತಿ ಇನ್ನಷ್ಟು ನಿಕೃಷ್ಟವಾಗಿದೆ. ಪ್ರತಿ ಹೆಜ್ಜೆ ಹೆಜ್ಜೆಗೂ ಅವಮಾನ, ದೌರ್ಜನ್ಯಗಳು, ಹಲವು ಕಟ್ಟಳೆಗಳಿಗೆ ಒಳಗಾಗುತ್ತಿರುವುದು ಕಾಣಬಹುದಾಗಿದೆ. ಭಾರತ ದೇಶ ಸ್ವಾತಂತ್ರ್ಯಗೊಂಡು 70 ವರ್ಷ ಗತಿಸಿದರೂ ಈ ಸಮುದಾಯಕ್ಕೆ ಸ್ವತಂತ್ರ ವಾದ ನೆಲೆಯೆಂಬುದೆ ಇಲ್ಲವೆಂದು ಹಲವು ಸಂಶೋಧನ ವರದಿಗಳ ಮೂಲಕ ತಿಳಿಯುತ್ತದೆ.

ಭಾರತದಲ್ಲಿನ ಬುಡಕಟ್ಟು ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ–ಗತಿ ಗಮನಿಸಿದಾಗ ಆ ಸಮುದಾಯದಲ್ಲಿನ ಜನರ ಶೈಕ್ಷಣಿಕ ಸ್ಥಿತಿ, ಉದ್ಯೋಗ ಸ್ಥಿತಿ, ಆರೋಗ್ಯ ಸ್ಥಿತಿಯಿಂದ ತಿಳಿದುಬರುತ್ತದೆ. ಈ ಸಮುದಾಯಲ್ಲಿಯೂ ಸಹ ಪಿತೃಪ್ರಧಾನ ಕುಟುಂಬ ವ್ಯವಸ್ಥೆ ತೀರಾ ಹಿಂದುಳಿದಿರುವುದು ಕಂಡುಬರುತ್ತದೆ. ಕೆಲವೊಂದು(ಪರಿಶಿಷ್ಟ) ಪಂಗಡಗಳಲ್ಲಿ ಮಾತೃ ಪ್ರಧಾನ ವ್ಯವಸ್ಥೆಯೂ ಕೂಡ ಪ್ರಾಬಲ್ಯಹೊಂದಿವೆ. ಇಲ್ಲಿ ಮಹಿಳೆಯರ ಪಾತ್ರ ಒಂದು ರೀತಿಯಲ್ಲಿ ಧನಾತ್ಮಕವಾಗಿವೆ ಮತ್ತೆ ಕೆಲವು ವಿಚಾರಗಳು, ವೈಚಾರಿಕ ಆಲೋಚನೆಗಳಿಂದಾಗಿ ಪಶುಸಂಗೋಪನೆ, ವ್ಯವಸಾಯವನ್ನು ಹುಟ್ಟುಹಾಕಿರುವ ದೆಸೆಯಲ್ಲಿ ಬುಡಕಟ್ಟು ಮಹಿಳೆಯರು ತಮ್ಮನ್ನು ತೊಡಗಿಸಿಕೊಂಡು ಇಡೀ ಕುಟುಂಬವನ್ನೇ ನಿಭಾಯಿಸುವ ಜವಾಬ್ದಾರಿಯನ್ನು ಹೊತ್ತು ಕಾರ್ಯ ಪ್ರವೃತ್ತರಾಗಿದ್ದಾರೆ. ಅವರು ತಮ್ಮ ಕುಟುಂಬದ ಏಳ್ಗೆಗಾಗಿ ಹಗಲಿರುಳು ಎನ್ನದೆ, ಮಳೆ ಬಿಸಿಲು ಎನ್ನದೆ ದುಡಿಯುತ್ತಿದ್ದಾರೆ. ಇವರಿಗೆ ತಮ್ಮ ಮುಂದಿನ ಭವಿಷ್ಯದ ಬಗ್ಗೆ ವಿಚಾರವಿಲ್ಲ. ಶ್ರಮದಾಯಕವಾದ ಜೀವನವನ್ನು ಸಾಗಿಸುತ್ತಿದ್ದಾರೆ. ಹೊರ

ಜಗತ್ತಿನಲ್ಲಿ ಏನು ನಡೆಯುತ್ತಿದೆ ಎಂಬುವದು, ನಾವು ಹೇಗಿದ್ದೇವೆ, ಮುಂದೆನಾಗಬೇಕು? ಎಂಬುದರ ಕಲ್ಪನೆಯೇ ಇಲ್ಲದೆ ಬದುಕುತ್ತಿದ್ದಾರೆ. ಸಮಜದ ಅರಿವು ಆಧುನಿಕತೆಗೆ ಹೊಂದಿಕೊಂಡು ಹೋಗುವಂತ ಶಕ್ತಿಯಿಲ್ಲದೆ ಸಾಗುತ್ತಿದ್ದಾರೆ.

ಬುಡಕಟ್ಟು ಜನಾಂಗದ ಮಹಿಳೆಯರು ಸಾಮಾನ್ಯ ಜನಾಂಗದ ಮಹಿಳೆಯರಿಗೆ ಹೋಲಿಕೆ ಮಾಡಿದಾಗ ಇವರಿಗೆ ಶಾಶ್ವತವಾದ ಜೀವನಾಧಾರಗಳಿಲ್ಲ. ಹೆಚ್ಚು ಆದಾಯ ತರುವಂತಹ ಆರ್ಥಿಕ ಮೂಲ ಹೊಂದಿಲ್ಲ, ಮತ್ತು ಶೇ.10 ಪ್ರತಿಶತಕ್ಕಿಂತಲೂ ಕೆಳಗೆ ಬಡತನ ಮಟ್ಟ ಹೊಂದಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ವಾಸಮಾಡುವ ಮಹಿಳೆಯರು ಕಡಿಮೆ ಮಟ್ಟದ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಂಡು ಜೀವಿಸುತ್ತಿದ್ದಾರೆ. ಅಲ್ಲದೆ ಕೃಷಿ, ಕರಕುಶಲ ವಸ್ತುಗಳ ತಯಾರಿಕೆಯಲ್ಲಿ ತೋಡಗಿಸಿಕೊಂಡಿದ್ದಾರೆ. ಬುಡಕಟ್ಟು ಮಹಿಳೆಯರು ಯಾವುದೆ ನಿರಂತರವಾದ ಕೆಲಸದಲ್ಲಿ ತೋಡಗಿಸಿಕೊಂಡಿಲ್ಲ. ಸರಕಾರದಿಂದ ಪಡೆಯುವ ಯೋಜನೆಗಳು ಈ ಜನಾಂಗದ ಜನರಿಗೆ ಸರಿಯಾದ ರೀತಿಯಲ್ಲಿ ತಲಿಪುತ್ತಿಲ್ಲ. ಸಂಚಾರಿ ಜೀವನ ಸಾಗಿಸುತ್ತಿರುವ ಈ ಜನಾಂಗದವರ ಮಕ್ಕಳಿಗೆ ಶಿಕ್ಷಣದ ಪ್ರವೇಶ ಕೊರತೆ ಎದ್ದುಕಾಣುತ್ತದೆ. ಚಿಕ್ಕಮಕ್ಕಳನ್ನು ಸಹ ಕೆಲಸಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಪ್ರತಿದಿನ ದುಡಿದ ಹಣವನ್ನು ತಮ್ಮ ಗಂಡ ಅಥವಾ ತಂದೆಗೆ ನೀಡುತ್ತಾರೆ. ಹದಿಹರೆಯದ ಯುವತಿಯರನ್ನು ಪೋಷಕರು ಶಾಲೆಗೆ ಕಳುಹಿಸುದಿಲ್ಲ. ಶಾಲೆ ಕಲಿಯುವ ಮಕ್ಕಳು ತಂದೆ ತಾಯಿಯೊಂದಿಗೆ ಕೆಲಸಕ್ಕೆ ಹೋಗುವುದರಿಂದಾಗಿ ಇವರಿಗೆ ಕಲಿಕೆಯ ಜ್ಞಾನದ ಮರೆವು ಹೆಚ್ಚಾಗಿದೆ. ಅನಾರೋಗ್ಯ, ಅಪೌಷ್ಠಿಕತೆ, ರಕ್ತಹೀನತೆ ಬಗ್ಗೆ ಜಾಗೃತಿಯಿಲ್ಲದೆ ಇರುವುದರಿಂದ ಪ್ರಾಣಾಪಾಯದಂತಹ ರೋಗಿಗಳಿಗೆ ಬಲಿಯಾಗುತ್ತಿದ್ದಾರೆ.

ಹೀಗೆ ಹಲವಾರು ಸಮಸ್ಯೆ ಸವಾಲುಗಳನ್ನು ಎದುರಿಸುತ್ತ ಬುಡಕಟ್ಟು ಮಹಿಳೆಯರು ಬದುಕನ್ನು ಸಾಗಿಸುತ್ತಿದ್ದಾರೆ ಎಂದು ಸಂಶೋಧನಾತ್ಮಕ ಸಮೀಕ್ಷೆ ಮಾಡಿದಾಗ ತಿಳಿದು ಬಂದಿದೆ. ಕಾಡು ಮೇಡುಗಳಲ್ಲಿ ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುತ್ತ ಸಂಚಾರಿ ಜೀವನವನ್ನೇ ಸಾಗಿಸುತ್ತಿದ್ದಾರೆ. ಇದರಿಂದಾಗಿ ತಮ್ಮ ಮಕ್ಕಳ ಶಿಕ್ಷಣ, ಆರೋಗ್ಯ, ಭವಿಷ್ಯದ ಬಗ್ಗೆ ವಿಚಾರಿಸದೆ ಊರಿಂದೂರಿಗೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಅಲೆದಾಡುತ್ತಿದ್ದಾರೆ. ಆದ್ದರಿಂದಲೇ ಈ ಜನಾಂಗದಲ್ಲಿ ಶಿಶುಮರಣ ಪ್ರಮಾಣ ಮತ್ತು ಗರ್ಭಿಣಿ ಮಹಿಳೆಯರ ಮರಣ ಪ್ರಮಾಣ, ಅಪೌಷ್ಠಿಕತೆಯಿಂದ ಬಳಲುವ ಮಹಿಳೆ, ಮಕ್ಕಳ ಪ್ರಮಾಣ ಹೆಚ್ಚಾಗಿ ಕಂಡುಬರುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ ಅನಾರೋಗ್ಯ, ಬಳಲಿಕೆ, ದೀರ್ಘಕಾಲಿಕ ರೋಗಗಳ ಸೋಂಕು, ಪುರುಷ ಮತ್ತು ಮಹಿಳೆಯರಲ್ಲಿ ಫಲವತ್ತತೆ ಕೊರತೆ, ಕುಡಿಯುವ ನೀರಿನ ಕೊರತೆ, ನೈರ್ಮಲ್ಯದ ಕೊರತೆಯಿಂದ ಬಳಲುತ್ತಿವುದು ಹೆಚ್ಚಾಗಿ ಕಂಡುಬರುತ್ತದೆ.

ಬುಡಕಟ್ಟು ಜನಾಂಗದವರು ಪೂರ್ವಗ್ರಹ ಪೀಡಿತ ಮನಸ್ಸಿನಿದ ಹಿಂದಿನ ಸಾಂಪ್ರದಾಯಗಳನ್ನು ಚಾಚು ತಪ್ಪದೆ ಪಾಲಿಸಿಕೊಂಡು ಬರುತ್ತಿದ್ದಾರೆ. ಈ ಜನಾಂಗದ ಮಹಿಳೆಯರು ಅನುಭವಿಸುವಂತ ಯಾತನೆ ಅಷ್ಟಿಷ್ಟಲ್ಲ. ಯುವತಿಯರು ವೃತುಮತಿಯಾದ ಸಂದರ್ಭದಲ್ಲಿ ಯುವತಿಯರಿಗೆ ಮನೆಯೊಳಗೆ ಪ್ರವೇಶವಿಲ್ಲ, ಯಾರನ್ನು ಮುಟ್ಟುವಂತಿಲ್ಲ, ಮುಟ್ಟಿದರೆ ಮೈಲಿಗೆಯಾಗುತ್ತದೆ ಎಂದು ಅವರಿಗೆ ಮನೆಯ ಹೊರಗೆ ಇಡಲಾಗುತ್ತದೆ. ಇಂತಹ ಅನೇಕ ಮೂಡನಂಬಿಕೆಗಳು, ಅಂಧಾನುಕರಣೆಗಳನ್ನು 21ನೇ ಶತಮಾನದಲ್ಲಿಯೂ ಆಚರಿಸಿಕೊಂಡು ಬರುವುದನ್ನು ಕಾಣಬಹುದಾಗಿದೆ. ಇದೆಲ್ಲದಕ್ಕೂ ಮುಖ್ಯ ಕಾರಣ ಶಿಕ್ಷಣದ ಕೊರತೆ ಮತ್ತು ವೈಜ್ಞಾನಿಕ, ವೈಚಾರಿಕ ಚಿಂತನೆಯ ಕೊರತೆಯಿಂದಾಗಿಯೇ ಅವರು ಪಶು ಪಕ್ಷಿಗಳಂತೆ ಜೀವನ ಸಾಗಿಸುತ್ತಿದ್ದಾರೆ. ಬುಡಕಟ್ಟು ಸಮುದಾಯದ ಜನರ ಸಾಕ್ಷರತೆಯ ಪ್ರಮಾಣ ನೋಡಿದಾಗ ಶೇ.13.70% ರಷ್ಟು ಮಹಿಳೆಯರು 5.01% ರಷ್ಟು ಜನರು ಮಾತ್ರ ಶಿಕ್ಷಿತರಾಗಿದ್ದಾರೆ ಎಂಬುವುದು ಖೇದಕರ ಸಂಗತಿಯಾಗಿದೆ. ಬುಡಕಟ್ಟು ಜನಾಂಗದವರಿಗೆ ಶಿಕ್ಷಣ ಕಲ್ಪಿಸುವ ಸಲುವಾಗಿಯೇ ಮೊಬೈಲ್ ಸ್ಕೂಲ್, ಸಂಚಾರಿ ಗ್ರಂಥಾಲಯದಂತಹ ಯೋಜನೆಗಳನ್ನು ಸರ್ಕಾರಗಳು ಹಾಕಿಕೊಂಡಿವೆ. ಅದಾಗ್ಯೂ ಕೂಡ ಬುಡಕಟ್ಟು ಮಹಿಳೆಯರ ಸಾಕ್ಷರತೆಯ ಪ್ರಮಾಣ ಹೆಚ್ಚಾದಂತೆ ಕಂಡುಬರುತ್ತಿಲ್ಲ. ಬುಡಕಟ್ಟು ಜನರು ಮಹಿಳೆಯರಿಗೆ ಶಿಕ್ಷಣ ಕೊಡಿಸುವದೆ ಅಪರಾಧ, ತಪ್ಪು ಎಂಬ ಕಲ್ಪನೆ ಮನೆ ಮಾಡಿದೆ, ಆದ್ದರಿಂದಲೇ ಇವರು ಬಾಲಕಿಯರನ್ನು ಶಾಲೆಗೆ ಕಳುಹಿಸುವುದಿಲ್ಲ. 16 ವರ್ಷದ ನಂತರ ಶಾಲೆ ಬಿಡಿಸುತ್ತಾರೆ ಇದರಿಂದಾಗಿ ಸಮಾಜದಲ್ಲಿನ ಬದಲಾವಣೆಗಳ ಬಗ್ಗೆ ಅರಿವು ಸಹ ಅವರಿಗಿಲ್ಲ, ಇವರನ್ನು ಸಂಪೂರ್ಣವಾಗಿ ಅಭಿವೃದ್ಧಿ ಪಡಿಸಬೇಕಾದರೆ ಸಮಾಜದ ಬಗ್ಗೆ ಅರಿವು ಮೂಡಿಸಬೇಕು, ಸಾಕ್ಷರತೆ ಕುರಿತು ತರಬೇತಿ ನೀಡಬೇಕು, ಶಿಕ್ಷಣದ ಅಗತ್ಯತೆಯನ್ನು ಮನವರಿಕೆ ಮಾಡಿಕೊಡುವುದರ ಜೊತೆಗೆ ಉದ್ಯೋಗನ್ನು ಕಲ್ಪಿಸಿಕೊಡಬೇಕು. ಸ್ವಸಹಾಯ ಗುಂಪುಗಳನ್ನು ರಚಿಸುವಂತೆ ಸಲಹೆ ಸೂಚನೆ ಕೊಡುವುದು ಮತ್ತು ಅವುಗಳನ್ನು ಪೋಷಣೆ ಮಾಡುವುದು, ಸ್ವಸಹಾಯ ಸಂಘಗಳಲ್ಲಿ ಅಧಿಕಾರ ಹಾಗೂ ಆಡಳಿತ ಮಾಡುವಂತಹ ಸಾಮರ್ಥ್ಯ ಅವರಲ್ಲಿ ಬೆಳೆಸುವಂತಹ ಪೂರಕ ಯೋಜನೆಗಳನ್ನು ಹಾಕಿಕೊಳುವುದು ಅವುಗಳ ಸರಿಯಾದ ಕಾರ್ಯಚರಣೆ ಮತ್ತು ಅನುಷ್ಠಾನ, ನೀತಿ ನಿಯಮಗಳ ಕುರಿತು ಮರು ವ್ಯಾಖ್ಯಾನ ಮಾಡುವ ಅವಶ್ಯಕತೆಯಿದೆ. ಸಮಾಜದಲ್ಲಿ ಈ ರೀತಿಯ ತಾರತಮ್ಯ, ಕೌಟುಂಬಿಕ ಮತ್ತು ಸಾಮಾಜಿಕ ವಿಕಾಸಕ್ಕೆ ಮಾರಕವಾಗಿವೆ. ಇಂತಹ ಭೇದ ಭಾವದಿಂದಾಗಿಯೆ ಮಹಿಳೆಯರು ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮುಕ್ತವಾಗಿ ಭಾಗವಹಿಸಲು ಅನುಕೂಲ ಮಾಡಿಕೊಡಬೇಕು ಅಂದಾಗ ಮಾತ್ರ ಬುಡಕಟ್ಟು ಮಹಿಳೆಯರಲ್ಲಿ ಬದಲಾವಣೆ ತರಲು ಸಾಧ್ಯ.

ಭಾರತದ ಬುಡಕಟ್ಟು ಮಹಿಳೆಯರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ತರಬೇತಿ, ಕೌಶಲ್ಯ ಒದಗಿಸಿಕೊಂಡಬೇಕು ಜೊತೆಗೆ ಪ್ರಾಯೋಗಿಕವಾಗಿ ನಿರ್ವಹಿಸಲು ಪ್ರೋತ್ಸಾಹಿಸಬೇಕು. ಬಡತನ ಮಟ್ಟದಿಂದ ಮೇಲೆ ಬರಲು ಹೊಸ ಆರ್ಥಿಕ ನೀತಿ, ತಂತ್ರಗಳನ್ನು ಅಳವಡಿಸಿಕೊಳ್ಳುವಂತೆ ಪ್ರೇರೇಪಿಸಬೇಕು, ಮತು ಸ್ವಸಹಾಯ ಗಂಪುಗಳನ್ನು ನಿರ್ಮಿಸಿಕೊಂಡು ಅಧಿಕಾರ ನಿರ್ವಹಿಸುವ ಜವಾಬ್ದಾರಿಗಳನ್ನು ತಿಳಿಸಬೇಕು. ಸ್ಥಳಿಯ ಮಟ್ಟದಲ್ಲಿ ನಡೆಯುವಂತ ರಾಜಕೀಯದಲ್ಲಿ ಪಾಲ್ಗೊಂಳುವಂತೆ ಮತ್ತು ರಾಜಕೀಯ ನೀತಿ, ನಿಯಮಗಳನ್ನು ರೂಢಿಸಿಕೊಳ್ಳುವಂತೆ ಸಲಹೆ ನೀಡಬೇಕು. ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಶಿಕ್ಷಣ, ಸಂಪರ್ಕ, ಸಮಾಜದ ಬಗ್ಗೆ ಜಾಗೃತಿ ಮೂಡಿಸುವಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು.

ಬುಡಕಟ್ಟು ಮಹಿಳೆಯರಿಗೆ ಎಲ್ಲ ಸೌಕರ್ಯಗಳನ್ನು ರಾಷ್ಟ್ರ, ರಾಜ್ಯಮಟ್ಟದಲ್ಲಿ ದೊರೆಯುವಂತೆ ಮಾಡಬೇಕು. ಬುಡಕಟ್ಟು ಮಹಿಳೆಯರ ಸಾಮಾಜಿಕ ಸ್ಥಿತಿ–ಗತಿ ಬದಲಾವಣೆಗೆ ಸ್ಪಂದಿಸಬೇಕು. ಅವರಲ್ಲಿ ಸ್ವಸಾಮರ್ಥ್ಯ, ಸ್ವತಂತ್ರವಿಚಾರ, ದೂರದೃಷ್ಠಿಯ ಮನೋಭಾವ ಬೆಳೆಸಿಕೊಳ್ಳಲು ಅನುವು ಮಾಡಿಕೊಡಬೇಕು. ಅಭದ್ರತೆಯಿಂದ ಬಳಲುವ ಜನತೆಗೆ ಆಡಳಿತ ಮಾಡುವ ಸರ್ಕಾರಗಳು ಗುರುತಿಸಿ ಸಾವಿಂಧಾನಿಕ ಸೌಲಭ್ಯಗಳು ದೊರೆಯುವಂತೆ ಮಾಡಬೇಕು. ಈ ಮೂಲಕವಾಗಿ ಬುಡಕಟ್ಟು ಜನರನ್ನು ಸಹ ಸಮಾಜದ ಸೇತುವೆಯಾಗಿ ತೆಗೆದುಕೊಳ್ಳಬೇಕಾಗಿದೆ. ಇದರಿಂದ ಅವರಲ್ಲಿಯೂ ಆತ್ಮವಿಶ್ವಾಸ, ನಂಬಿಕೆ, ವಿಚಾರಶೀಲ ಮಮೋಭಾವ ಬರುತ್ತದೆ. ಅವರು ಬದಲಾಣೆಯತ್ತ ಗಮನಹರಿಸಿ ಸಮಾಜದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಹಾಗೂ ಶೈಕ್ಷಣಿಕವಾಗಿ ಸುಧಾರಿಸಿಕೊಂಡು ದೇಶದ ಅಭಿವೃದ್ಧಿಗಾಗಿ ತಮ್ಮಲ್ಲಿರುವ ಸಾಮರ್ಥ್ಯವನ್ನು ಮಾನವ ಸಂಪನ್ಮೂಲವನ್ನು ಒದಗಿಸಿಕೊಡುತ್ತಾರೆ.

ಒಟ್ಟಾರೆಯಾಗಿ ಬುಡಕಟ್ಟು ಜನಾಂಗದ ಜನರು ಹಲವಾರು ಸಮಸ್ಯೆಗಳೊಂದಿಗೆ ಬದುಕುತ್ತಿದ್ದಾರೆ. ಅವರ ಬದುಕಿನ ಮಟ್ಟ ಅತ್ಯಂತ ಕೆಳಸ್ತರದ್ದಾಗಿದೆ. ಭಾರತ ದೇಶ ಸ್ವತಂತ್ರಗೊಂಡು 70 ವರ್ಷಗಳು ಗತಿಸಿದರು ಕೂಡ ಎಷ್ಟೋ ಜನ ಸಮುದಾಯಗಳು ಇವತ್ತಿಗೂ ಸಮಾಜದ ಮುಖ್ಯವಾಹಿನಿಗೆ ಬಂದಿಲ್ಲ, ಬಂದರೂ ಕೂಡ ನಿಕೃಷ್ಟ ಜೀವನ ನಡೆಸುತ್ತಿದ್ದಾರೆ. ಎಷ್ಟೋ ಬುಡಕಟ್ಟುಗಳು ಇದೆ ಸಮುದಾಯದ ವರ್ಗಕ್ಕೆ ಸೇರಿವೆ ಎಂದು ತಿಳಿಯಲು ಮತ್ತು ನಿರ್ದಿಷ್ಟ ಪ್ರದೇಶ ಇವರ ವಾಸಸ್ಥಳ

ಎಂಬುದಕ್ಕೂ ಯಾವುದೇ ರೀತಿಯಾ ಆಧಾರಗಳಿಲ್ಲದಂತೆ ಬದುಕುತ್ತಿದ್ದಾರೆ. ಬುಡಕಟ್ಟು ಮಹಿಳೆಯರು ತಮ್ಮ ಜೀವನಪರ್ಯಂತ ದುಡಿಯುತ್ತ ಬಳಲಿ ಬೆಂಡಾಗಿ ಕೊನೆಗೆ ಯಾವುದಾದರೊಂದು ರೋಗಕ್ಕೆ ಬಲಿಯಾಗಿ ಮರಣಹೊಂದುತ್ತಿರುವುದು ಕಂಡುಬರುತ್ತದೆ. ಸರಕಾರವು ಬುಡಕಟ್ಟು ಮಹಿಳೆಯರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಾದ ಅನಿವಾರ್ಯತೆಯಿದೆ

ಈ ಮೂಲಕ ಬುಡಕಟ್ಟು ಜನಾಂಗದವರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಸಹೋದರತೆ, ಸಹಬಾಳ್ವೆಯಿಂದ ಬದುಕುವಂತೆ ಅವಕಾಶ ಕಲ್ಪಿಸಬೇಕಾಗಿದೆ. ಅಂದಾಗ ಮಾತ್ರ ದೇಶದ ಅಭಿವೃದ್ಧಿ, ಹಾಗೂ ಮಾನವ ಕುಲದ ಅಭಿವೃದ್ಧಿ ಸಾಧ್ಯ. ಇದರಿಂದ 'ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು' ಎಂಬ ತತ್ವದ ಪರಿಪಾಲನೆ ಮಾಡಿದಂತಾಗುತ್ತದೆ. ಎಲೆ ಮರೆಯಕಾಯಿಯಂತೆ ಜೀವನ ಸಾಗಿಸುತ್ತಿರುವ ಬುಡಕಟ್ಟು ಜನ ಸಮುದಾಯಗಳನ್ನು ಗುರುತಿಸಿ ಮುಂಚೂಣಿಗೆ ತರಲು ಸಾಧ್ಯವಾಗುತ್ತದೆ.

**ಆಧಾರ ಗ್ರಂಥಗಳು:**

1. ಭಾರತದ ಜನಗಣತಿ 2001–ಗೆಜೆಟೀಯರ್
2. ಭಾರತದ ಸಂವಿಧಾನ–ಡಾ.ಐ.ಎಸ್.ವಿದ್ಯಾಸಾಗರ
3. ಬುಡಕಟ್ಟು ವ್ಯವಹಾರಗಳ ಸಚಿವಾಲಯ, ಭಾರತ ಸರಕಾರ
4. ಪಶ್ಚಿಮ ಬಂಗಾಳದ ಬುಡಕಟ್ಟು ಮಹಿಳೆಯರ ಬದಲಾಗುತ್ತಿರುವ ಸ್ಥಿತಿ – ಅಂರ್ತಜಾಲ
5. ಭಾರತದ ಬುಡಕಟ್ಟು ಸಮುದಾಯದ ಮಹಿಳೆಯರ ಸ್ಥಿತಿ – ಅಂರ್ತಜಾಲ
6. ಮಹಿಳೆಯರ ಪ್ರಗತಿಗೆ ಸಂಪನ್ಮೂಲಗಳ ಕ್ರೋಢಿಕರಣ – ಡಾ. ಉಜ್ವಲಾ ಹಿರೇಮಠ
7. ಬುಡಕಟ್ಟು ಮಹಿಳೆಯರು ಮತ್ತು ಅಭಿವೃದ್ಧಿ – ಆರ್. ಎಸ್. ಮನ್ (ಸಂ)